

# ಒಡವೆಯಲ್ಲಿ ವರ್ಣಮಾಲೆ

**ಒಡವೆ ಮೇಲೆ ತಮ್ಮ ಅಥವಾ ತಮ್ಮ ಪ್ರೀತಿಪಾತ್ರರ ಹೆಸರಿನ, ದೇವರ ಹೆಸರಿನ ಇಂಗ್ಲಿಷ್‌ನ ಮೊದಲ ಅಕ್ಷರವನ್ನು ಬಳಸಿ ಧರಿಸುವುದು ಟ್ರೆಂಡ್ ಆಗಿದೆ. ಇಂಗ್ಲಿಷ್ ವರ್ಣಮಾಲೆಯ ಅಕ್ಷರವನ್ನು ಉಂಗುರ, ಪೆಂಡೆಂಟ್, ಬ್ರೇಸ್ಲೆಟ್ ಮುಂತಾದ ಆಭರಣಗಳಲ್ಲಿ ಕೆತ್ತಿಸಿ ಧರಿಸುವುದರಲ್ಲಿ ಯುವಕ ಯುವತಿಯರು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ.**

**ಆಶಾ ಎಸ್. ಕುಲಕರ್ಣಿ**

ಮಹಿಳೆಯರ ಅಲಂಕಾರದಲ್ಲಿ ಆಭರಣದ ಪಾತ್ರ ಮಹತ್ವದ್ದು. ಇವು ನಮ್ಮ ಅಂದವನ್ನು ಹೆಚ್ಚಿಸುವುದರ ಜೊತೆಗೆ ಒಂದು ವಿಶಿಷ್ಟ ಲುಕ್ ನೀಡುತ್ತವೆ. ಮಹಿಳೆಯರು ತಾವು ಧರಿಸುವ ಯಾವುದೇ ಉಡುಪುಗಳಿರಲಿ ಅದಕ್ಕೆ ಒಪ್ಪುವ ಜ್ಯುವೆಲ್ಲರಿಯಲ್ಲಿ ಏನಾದರೂ ಒಂದು ವಿಶೇಷತೆಯಿರಬೇಕೆಂದು ಬಯಸುವುದು ಸಹಜ. ಇಂತಹ ಸಾಕಷ್ಟು ವಿಶೇಷತೆಗಳನ್ನು ಒಳಗೊಂಡಿರುವುದೇ ಇಂಗ್ಲಿಷ್ ವರ್ಣಮಾಲೆಯನ್ನು ಪ್ರತಿಬಿಂಬಿಸುವ ವಿಶಿಷ್ಟ ಒಡವೆಗಳು.

ಸಿಂಪಲ್ ಆಗಿರುವ ಉಡುಪು ಧರಿಸಿದರೂ ಅದಕ್ಕೆ ಮ್ಯಾಚ್ ಆಗುವ ಆಭರಣ ತೊಟ್ಟರೇ ಚಂದ. ಹಾಗೆಯೇ ಗ್ರ್ಯಾಂಡ್ ಉಡುಪು ಧರಿಸಿದಾಗ ಗ್ರ್ಯಾಂಡಾಗಿರುವ ಆಭರಣ ತೊಟ್ಟರೇ ನೀವು ಧರಿಸುವ ಉಡುಪಿಗೆ ಒಂದು ಶೋಭೆ. ಇದೀಗ ಇಂಗ್ಲಿಷ್ ವರ್ಣಮಾಲೆಯಾದ ಎ ಯಿಂದ ಝಡ್‌ವರೆಗಿನ ಎಲ್ಲಾ ಅಕ್ಷರಗಳ ಆಭರಣಗಳು ಮಾರುಕಟ್ಟೆಗೆ ಎಂಟ್ರಿ ಕೊಟ್ಟಿದ್ದು ಎಲ್ಲರ ಗಮನಸೆಳೆಯುತ್ತಿವೆ. ಸುಮಾರು ವರ್ಷಗಳ ಹಿಂದೆ ಮದುವೆ ನಿಶ್ಚಿತಾರ್ಥದ ಸಮಯದಲ್ಲಿ ಮದುಮಗಳ ಹೆಸರು ಮತ್ತು ಮದುಮಗನ ಹೆಸರನ್ನು ಅವರವರು ಬದಲಿಸಿಕೊಳ್ಳುವ ಉಂಗುರದ ಮೇಲೆ ಕೆತ್ತನೆ ಮಾಡಿಸಿ ಧರಿಸುವ ಟ್ರೆಂಡ್ ಪ್ರಾರಂಭವಾಗಿತ್ತು. ಸಾಕಷ್ಟು ವರ್ಷಗಳ ಕಾಲ ಈ ಟ್ರೆಂಡ್ ನಿರಂತರವಾಗಿ ನಡೆದುಕೊಂಡು ಬಂದಿತ್ತು.

ಕೆಲ ದಿನಗಳ ನಂತರ ಉಂಗುರಗಳ ಮೇಲೆ ಪೂರ್ಣ ಹೆಸರು ಬರೆಸುವ ಬದಲು ಅವರವರ ಹೆಸರಿನ ಮೊದಲ ಅಕ್ಷರ ಮಾತ್ರ ಬರೆಸಿಕೊಂಡು ಧರಿಸುವ ಟ್ರೆಂಡ್ ಪ್ರಾರಂಭವಾಯಿತು. ಇದೀಗ ಇದರ ಮುಂದುವರೆದ ಅಧ್ಯಾಯವೇ ಎಂಬಂತೆ ತಮಗೆ ಇಷ್ಟವಾದ ದೇವರ ಹೆಸರುಗಳು, ತಮ್ಮದೇ ಹೆಸರು, ಅಥವಾ ಗೆಳೆಯ ಗೆಳತಿ, ತಮಗೆ ಅತ್ಯಂತ ಪ್ರೀತಿಪಾತ್ರರಾದವರ ಹೆಸರು, ಒಡಹುಟ್ಟಿದ ಅಕ್ಕ ತಂಗಿ, ಅಣ್ಣತಮ್ಮ, ತಂದೆ ತಾಯಿ, ಆತ್ಮೀಯ ಸ್ನೇಹಿತರ ಮೊದಲ ಅಕ್ಷರದ ಪದಗಳಿರುವ ಉಂಗುರಗಳನ್ನು ತೊಟ್ಟು ಅವರ ಜೊತೆಗೆ